ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ

435 (671) ಶ್ರೀ ಕೆ ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2. ಒಳಚರಂಡಿ ಅವ್ಯವಸ್ಥೆಯಿಂದಾಗಿ ಹಾಗೂ ಶುದ್ಧೀಕರಣ ವ್ಯವಸ್ಥೆ ಇಲ್ಲದೆ ಬಯಲು ಪ್ರದೇಶದಲ್ಲಿಯೇ ನೀರನ್ನು ಹರಿಯಲು ಬಿಟ್ಟಿರುವುದರಿಂದ ಕುಡಿಯುವ ನೀರಿನ ಬಾವಿಗಳು ಹಾಳಾಗಿದ್ದು ಸೊಳ್ಳೆಗಳು ವಿಪರೀತವಾಗಿದ್ದು ಮಲೇರಿಯಾ ರೋಗ ಹರಡಲು ಕಾರಣವಾಗಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮಗಳೇನು?

3. ಒಳಚರಂಡಿ ವ್ಯವಸ್ಥೆ ಸುವ್ಯವಸ್ಥಿತವಾಗಿರಿಸಲು ಸರ್ಕಾರವು ಕಾಲನಿಗದಿತ ಕಾರ್ಯ ಕ್ರಮಗಳನ್ನು ಯಾವಾಗ ಹೇಗೆ ಹಮ್ಮಿಕೊಳ್ಳುವುದು (ಒಳಚರಂಡಿ ವ್ಯವಸ್ಥೆಯ ಯೋಜನೆಯ ವಿವರವನ್ನು ನೀಡುವುದು)

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

1. ಬಂದಿದೆ.

2. ಒಳಚರಂಡಿ ಯೋಜನೆಯ ನಿರ್ವಹಣೆಯನ್ನು ನಗರಪಾಲಿಕೆ ನೋಡಿಕೊಳ್ಳುತ್ತಿದೆ. ಒಳಚರಂಡಿ ಇಲ್ಲದಿರುವ ಪ್ರದೇಶಗಳಿಗೆ ಹಾಗೂ ಹಾಲಿ ಇರುವ ವ್ಯವಸ್ಥೆಯ ನವೀಕರಣಕ್ಕೆ ಒಂದು ಹೊಸ ಯೋಜನೆಯನ್ನು ರೂಪಿಸಲಾಗುತ್ತಿದೆ.

3. ಮಂಗಳೂರು ಮಹಾನಗರಪಾಲಿಕೆಯವರು ಒಂದು ಸಮಗ್ರ ಒಳಚರಂಡಿ ಯೋಜನೆಯನ್ನು ತಯಾರು ಮಾಡಲು ಈಗಾಗಲೇ ಸಮಾಲೋಚಕರೊಡನೆ ಕ್ರಮ ತೆಗೆದುಕೊಂಡಿರುತ್ತಾರೆ. ಸಮಗ್ರ ಯೋಜನೆಯು ತಯಾರಾದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಟಾಟಾ ಕಂಪನಿಯವರು ಉದ್ದಿಮೆ ಸ್ಥಾಪನೆ

436 (862) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ):- ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಟಾಟಾ ಕಂಪನಿಯವರ ಹೊಸ ಟೆಲ್ಕೊ ಉದ್ದಿಮೆ ಪ್ರಾರಂಭಿಸಲು ಸರ್ಕಾರವು ಪರವಾನಿಗೆ ನೀಡಿದೆಯೇ, ಈ ಉದ್ದಿಮೆಯಿಂದ ಎಷ್ಟು ಜನ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯಬಹುದು?

ಶ್ರೀ ಆರ್.ಎ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು)

ಅ) ಧಾರವಾಡ ಬಳಿ ಇರುವ ಗ್ರೋಥ್ ಸೆಂಟರ್‌ಗಳಲ್ಲಿ ಟೆಲ್ಕೊ ಕಂಪನಿಯವರು ಉದ್ದಿಮೆ ಪ್ರಾರಂಭಿಸಲು ಸರ್ಕಾರದ ವತಿಯಿಂದ ಅನುಮೋದನೆ ನೀಡಲಾಗಿದೆ. ಈ ಉದ್ದಿಮೆಯಲ್ಲಿ ಮೊದಲನೇ ಹಂತದಲ್ಲಿ ಪ್ರತಿ ವರ್ಷ 5000 ಭಾರಿ ಟ್ರಕ್‌ಗಳನ್ನು ತಯಾರಿಸುವ ಗುರಿ ಹೊಂದಿದ್ದು, ಇದರಲ್ಲಿ ಬಂಡವಾಳ ಹೂಡಿಕೆ ರೂ. 150-00 ಕೋಟಿ ಆಗಿರುತ್ತದೆ. ಸದರಿ ಕಾರ್ಖಾನೆಯಲ್ಲಿ ಅಂದಾಜು 1500 ಜನರಿಗೆ ಉದ್ಯೋಗಾವಕಾಶ ದೊರಕುವ ನಿರೀಕ್ಷೆ ಇದೆ.

ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಕುಡಿಯುವ ನೀರಿನ ಪೂರೈಕೆ

437 (858) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಪೂರೈಕೆಯಿಲ್ಲದೆ ನಗರದ ಜೊತೆ ಪರಿತಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ಈ ನಗರಗಳಿಗೆ ದಿನಂಪ್ರತಿ 20 ದಶಲಕ್ಷ ಗ್ಯಾಲನ್ ನೀರನ್ನು ಹಾಲಿ ಇರುವ ಸುಮಾರು 7 ಲಕ್ಷ ಜನಸಂಖ್ಯೆಗೆ ಸರಬರಾಜು ಮಾಡಲಾಗುತ್ತಿದೆ.

ಈ ಅವಳಿ ನಗರಗಳ ಜನಸಂಖ್ಯೆಗೆ ಸಾಕಾಗುವಷ್ಟು ಸಗಟು (ಬಲ್ಕ್ ಸಪ್ಲೈ) ನೀರು ಸರಬರಾಜು ಇದ್ದರೂ ಸಹ, ಈ ನೀರಿನ ಸಮರ್ಪಕ ವಿತರಣೆಗೆ ಬೇಕಾಗಿದ್ದ ಜಲಸಂಗ್ರಹಾಗಾರಗಳು, ವಿತರಣಾ ವ್ಯವಸ್ಥೆಯನ್ನು ಮಾಡುವ ಯೋಜನೆಯೊಂದನ್ನು ರೂ. 1350-00 ಲಕ್ಷಗಳ ಪರಿಷ್ಕೃತ ಅಂದಾಜಿನಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ 20 ಜಲ ಸಂಗ್ರಹಾಗಾರಗಳು (ಧಾರವಾಡದಲ್ಲಿ 10 ಹುಬ್ಬಳ್ಳಿಯಲ್ಲಿ 10) ಹಾಗೂ ವಿತರಣಾ ಕೊಳವೆಗಳ ಕಾರ್ಯ ಬಹುತೇಕ ಮುಗಿದಿದ್ದು, 20 ಸಂಗ್ರಹಾಗಾರಗಳ ಪೈಕಿ 19 ಜಲಸಂಗ್ರಹಾಗಾರಗಳು ಈಗಾಗಲೇ ಕೆಲಸ ಮಾಡುತ್ತಿವೆ. ಈ ಯೋಜನೆಯ ಎಲ್ಲಾ ಕೆಲಸಗಳನ್ನು ಮಾರ್ಚ್ 1977 ರೊಳಗೆ ಪೂರ್ಣವಾಗಿ ಮುಗಿಸಲಾಗುವುದು. ಈ ಎಲ್ಲಾ ಕೆಲಸಗಳನ್ನು ಕಾರ್ಯಗತಗೊಳಿಸಲಾಗಿರುವುದರಿಂದ ಈಗ ದಿನಂಪ್ರತಿ ತಲಾ 25 ಗ್ಯಾಲನ್‌ಗಳಷ್ಟು (113 ಲೀಟರ್‌ಗಳ) ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇದಲ್ಲದೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಸರ್ಕಾರದಿಂದ ಮಲಪ್ರಭಾ 2ನೇ ಹಂತದ ಯೋಜನೆಯನ್ನು ರೂ. 650.00 ಲಕ್ಷಗಳ ಅಂದಾಜಿನಲ್ಲಿ ಕಾರ್ಯಗತಗೊಳಿಸಿ ದಿನಂಪ್ರತಿ ಒಟ್ಟು 12 ದಶಲಕ್ಷ ಗ್ಯಾಲನ್ ನೀರು ಸರಬರಾಜು ಮಾಡಲು ಸಾಧ್ಯವಾಗಿದೆ.